ರಾಜ್ಯದಲ್ಲಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು

೬೪೩ (ಎ) ಶ್ರೀ. ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಪ್ರಾಣ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇನ್ನು ಮುಗಿಸಬೇಕಾಗಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ.

ಆ) ಈ ಮೇಲಿನ ಯೋಜನೆಗಳಿಗೆ, ಮುಗಿಸುವ ದಿನಾಂಕ,ಅಂದಾಜು ಮೊಬಲಗು, ಈವರೆಗೆ ಆಗಿರುವ ವೆಚ್ಚ, ಈ ವಿವರಗಳು.

ಇ) ಈ ಯೋಜನೆಗಳನ್ನು ಮುಗಿಸಲು ಬೇಕಾದ ಹಣ ಮತ್ತು ಈ ಯೋಜನೆಗಳ ಮೂಲ ಮತ್ತು ಈಚಿನ ಅಂದಾಜುಗಳ ವ್ಯತ್ಯಾಸ.

ಶ್ರೀ ಹೆಚ್.ಡಿ. ದೇವೇಗೌಡ.(ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಭಾರಿ — ೧೬
ಮಧ್ಯಮ — ೧೫

೩೧

ಆ) ಲಗತ್ತಿಸಿರುವ ಪಟ್ಟಿಯಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಇ) ಈ ಯೋಜನೆಗಳನ್ನು ಮುಗಿಸಲು ಬೇಕಾದ ಒಟ್ಟು ಹಣ ೨,೭೦೦.೭೭ ಕೋಟಿ. ರೂ. ಎಲ್ಲಾ ಯೋಜನೆಗಳ ಒಟ್ಟು ಮೂಲ ಮತ್ತು ಈಚಿನ ಅಂದಾಜುಗಳ ವ್ಯತ್ಯಾಸ ೩.೧೬೦ ಕೋಟಿ ರೂ. ಗಳು.

ANNEXURE

Statement ; **Projectwise details of cost, Expenditure etc., of presently on going major and medium irrigation projects.**

Sl. No.	Project	Likely date of completion	Original cost (Rs. in lakhs)	Present cost (Rs. in lakhs)	Excallation in cost.(Rs.in lakhs)	Expenditure upto Dec. 86
1	2	3	4	5	6	7
1	Upper Krishna Stage I	1995	28365	107110	78745	40146
2	Hippargi	1992	2153	18670	16517	383
3	Chataprabha Stage III	8th Plan	9054	37050	27996	6896
4	Malaprabha	8th Plan	2000	30735	28735	18185
5	Bennithora	8th Plan	1600	5012	3412	834
6	Bhadra	1988	888	6000	5112	5917
7a)	Tungabhadra L. B.	Completed (1968)	1744	9040	7296	7807
b)	Tungabhdra R B. LL Canal,	-do-	232	683	451	640
c)	Tungabhadra R.B HL Canal.	1990	300	1534	1234	1216

1	2	3	4	5	6	7
8	T. B. P. Modernisation	9th Plan	25300	25300	—	59
9	K.R.S. Modernisation	8th Plan	1480	5600	4120	946
10	Karanja	8th Plan	990	8973	7983	3610
11	Varahi	9th Plan	943	7000	6057	158
12	Harangi*	8th Plan	1100	12000	11100	8583
13	Hemavathy*	9th Plan	1630	58800	57170	22234
14	Kabini	8th Plan	2480	39000	36520	11354
15	K.R.S.RB HLC (Varuna)*	8th Plan	1850	5810	3960	1004
16	Yagachi*	9th Plan	3538	3538	—	129
	Totol Major :		85647	382055	296408	130101

17	Amarja	8th Plan	570	2510	1940	533
21	Upper Mullamari	1990	328	1526	1198	706
2	Lower Mullamari	8th Plan	836	2975	2139	388
23	Soudagar	1987	149	600	451	526
4	Hirehalla	8th Plan	635	1834	1199	226
5	Maskinala	th Plan	311	1590	1279	225
6	F C. to Ranikere	1988	230	529	299	299
7	Manchanabele	1989	500	1850	1350	1193
2	Taaka	1989	170	1200	1030	1122
	Voehole	1990	205	2100	1895	1356
28	Chulkinala	8th Plan	308	1580	1200	258
29	Teetha	1987	106	410	304	372
30	Arkavathy*	8th Plan	983	2225	1242	374
31	Chicklihole*	1990	340	700	360	393
32	Iggalur*	1990	342	1075	733	204
33	Nallur Amanikere*	1987	190	530	340	519
34	Uduthorehalla*	8th Plan	755	3342	2587	93
	Diversion of Chikkahole to Suvarnavathy*	1987	75	122	47	88
	Total Medium		7105	26698	19593	8875
TOTAL MAJOR & MEDIUM :			92752	409653	316001	138976

(*) Projects pending approval.

ಶ್ರೀ ಆರ್. ವೆಂಕಟರಾಮಯ್ಯ.—ಈ ಯೋಜನೆಗಳಿಗೆ ಮೊದಲು ಎಸ್ಟಿಮೇಟ್ ಮಾಡಿದ್ದುದು ೯೨೭ ಕೋಟಿ ರೂಪಾಯಿಗಳಿಗೆ. ಆದರೆ ಇವು ಮುಗಿಯಬೇಕಾದರೆ ೪೦೯.೫೩ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವರು ಹೆಚ್ಚುವರಿಯಾಗಿ ಈ ಯೋಜನೆಗಳಿಗೆ ಖರ್ಚು ಮಾಡಿರುವುದು ೩೧೬೦.೦೧ ಕೋಟಿ ರೂಪಾಯಿಗಳು. ಅಂದರೆ ಮೊದಲ ಅಂದಾಜಿಗಿಂತ ಶೇಕಡ ೫೦ ರಷ್ಟು ಹೆಚ್ಚು ಖರ್ಚು ಆಗಿದೆ. ಇದಕ್ಕೆ ಕಾರಣವೇನು ? ಮತ್ತೊಂದು ವಿಷಯವೆಂದರೆ, ಈ ಯೋಜನೆಗಳ ಮಣ್ಣಿನ ಕೆಲಸದಲ್ಲಿಯೇ ಶೇಕಡ ೬೦ ರಷ್ಟು ಹಣ ಸೋರಿ ಹೋಗಿದ್ದರೆ ಇತರೇ ಕೆಲಸಗಳಲ್ಲಿ ಶೇಕಡ ೫೦ ರಷ್ಟು ಹಣ ಸೋರಿಕೆ ಆಗಿದೆ. ಇಲ್ಲಿ ಕೆಲಸ ನಿಧಾನವಾಗಲು ಇದೂ ಸಹ ಒಂದು ಕಾರಣವಾಗಿದೆ. ನಮ್ಮ ರಾಜ್ಯದ ಬೊಕ್ಕಸಕ್ಕೆ ಇಷ್ಟು ಹಣ ನಷ್ಟವಾಗಲು ಯಾರು ಕಾರಣರೆಂಬುದನ್ನು ಹೇಳಬೇಕು ?

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿ ?

ಶ್ರೀ ಆರ್. ವೆಂಕಟರಾಮಯ್ಯ.—ನಾನು ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೇಳುತ್ತೇನೆ. ಕೇಂದ್ರ ಸರ್ಕಾರದವರು ತೆಲುಗುಗಂಗಾ ಯೋಜನೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡುತ್ತಾರೆಂದು ಪ್ರತಿಕೆಗಳಿಂದ ತಿಳಿದು ಬಂದಿದೆ. ಆದ್ದರಿಂದ ಈ ಬಗ್ಗೆ ನಮ್ಮ ರಾಜ್ಯಕ್ಕೆ ಆಗುವಂತಹ ಅನುಕೂಲ ಮತ್ತು ಅನಾನುಕೂಲಗಳೇನೆಂಬುದನ್ನು ತಾವು ತಿಳಿಸಬೇಕು. ಇವರ ಜೊತೆಗೆ ನಮ್ಮ ಯೋಜನೆಗಳ ವೆಚ್ಚ ಇಷ್ಟೊಂದು ಹೆಚ್ಚಾಗಲು ಕಾರಣವೇನೆಂದು ತಿಳಿಸಬೇಕಂ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಿಗೆ ಈ ಬಗ್ಗೆ ಯಾರು ಬ್ರೀಫ್ ಮಾಡಬೇತ್ತಾರೋ ಗೊತ್ತಿಲ್ಲ. ಏಕೆಂದರೆ, ಶೇಕಡ ೬೦ ರಷ್ಟು ಮಣ್ಣು ಸೋರಿಹೋಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ —ಮಣ್ಣು ಹಾಕದೆ ಕೆಲವರು ಹಣ ಪಡೆದಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ —ಆ ಬಗ್ಗೆ ತಮ್ಮಲ್ಲಿ ವಿವರಗಳು ಇದ್ದರೆ ಕೊಡಿ. ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮಣ್ಣು ಎಲ್ಲಿಯೂ ಸೋರಿ ಹೋಗುವುದಿಲ್ಲ. ನಾನು ಈ ವಿಷಯದ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ. ಏನೆಂದರೆ, ಈ ಯೋಜನೆಗಳ ಅಂದಾಜುಗಳು ನಾನಾ ಕಾರಣಗಳಿಂದ ಪುನರ್ವಿಮರ್ಶೆಗೆ ಒಳಗಾದಾಗ ಅಂದಾಜು ವೆಚ್ಚವು ಸಹ ಹೆಚ್ಚಾಗುತ್ತದೆ. ಈ ದೃಷ್ಟಿಯಿಂದ ಯೋಜನೆಗೆ ೧೬ ಕೋಟಿಗೆ ೧೯೬೬ರಲ್ಲಿ ಮಂಜೂರಾತಿ ಕೊಟ್ಟರು. ಇವತ್ತು ೬೦೦ ಕೋಟಿಗೆ ಮಂಜೂರಾತಿ ಮಾಡಿ ಮಂಥ ಕಾಲದಲ್ಲಿ ಒಂದು ಲಕ್ಷ ೨೦ ಸಾವಿರ ಎಕರೆಗೆ ಯೋಜನೆ ಮಾಡಿದ್ದರು. ಈಗ ೭ ಲಕ್ಷ ಎಕರೆಗೆ ನೀರು ಕೊಡಬೇಕು ಎಂದು ಅದನ್ನು ಪುನರ್ವಿಮರ್ಶೆ ಮಾಡಿದರು. ಅದಕ್ಕೋಸ್ಕರ ನೀವೆಲ್ಲಾ ೬೦ ಪರ್ಸೆಂಟ್ ಮಣ್ಣಿನಲ್ಲಿ ಸೋರಿ ಹೋಯಿತು, ೫೦ ಪರ್ಸೆಂಟ್ ಕಲ್ಲಿನಲ್ಲಿ ಹೋಯಿತು ಅಂದರೆ ಹೇಗೆ ?

ಶ್ರೀ ಆರ್. ವೆಂಕಟರಾಮಯ್ಯ.—ಹೋಗುವುದಿಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಹೋಗುವುದಿಲ್ಲ ಅಂದರೆ ಯಾವುದರಲ್ಲಿ ಹೋಗುವುದಿಲ್ಲ. ನಿಮ್ಮ ಫ್ಯಾಕ್ಟರಿಯಲ್ಲಿ ಹೋಗುವುದಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—೫೦ ಪರ್ಸೆಂಟ್ ಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಲ್ಲಿ ಹೋಗುತ್ತದೆ ಎಂದು ಸಮರ್ಥನೆ ಮಾಡಿಕೊಳ್ಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಸದನದಲ್ಲಿ ನಾವು ಕಾಲ ಕಳೆಯುವುದರಲ್ಲೂ ಹೋಗುತ್ತದೆ. ಚರ್ಚೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಎರಡೂ ಕಡೆ ಹೋಗಲಿ ಬಿಟ್ಟುಬಿಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟು ಎನ್‌ಕ್ವೈರಿ ಮಾಡಿ ಎಂದು ಹೇಳಿದರೆ ನಾನು ಮಾಡುತ್ತೇನೆ. ಅದನ್ನು ಬಿಟ್ಟು ೬೦ ಪರ್ಸೆಂಟ್, ೭೦ ಪರ್ಸೆಂಟ್ ಸೋರಿ ಹೋಗುತ್ತದೆ ಕಲ್ಲು ಹಾಕುವುದಿಲ್ಲವೇ, ಮಣ್ಣು ಹಾಕುವುದಿಲ್ಲವೇ ಎಂದರೆ ಅವಕ್ಕೆ ಸರ್ಕಾರ ಉತ್ತರ ಕೊಡುವುದು ಕಷ್ಟವಾಗುತ್ತದೆ. ಇವೊತ್ತು ನಾವು ಏನು ಮಾಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ೯೨೭ ಕೋಟಿ ಒರಿಜಿನಲ್ ಎಸ್ಟಿಮೇಟ್ ಇದೆ ಈಗ ಅದು ೩೧೬೦ ಕೋಟಿಗೂ ಹೆಚ್ಚಾಗುತ್ತದೆ ಎನ್ನುತಕ್ಕಂಥಾದನ್ನು ಹೇಳಿದ್ದೇನೆ. ಮೊದಲನೇ ಕಾರಣ, ಏರಿಯಾ ಆಫ್ ಇರಿಗೇಷನ್ ಜಾಸ್ತಿ ಎಕ್ಸ್‌ಪ್ಯಾಂಡ್

ಮಾಡುತ್ತಾ ಹೋದಾಗ ಮತ್ತು ಆ ಪ್ರಾಜೆಕ್ಟ್‌ಗಳಲ್ಲಿ ಮೂಲ ಅಂದಾಜನ್ನು ಇನ್‌ವೆಸ್ಟಿಗೇಷನ್ ಮಾಡ ತಕ್ಕಂಥ ಕಾಲದಲ್ಲಿ ತಾಂತ್ರಿಕ ನಿರ್ಣಯಗಳಾಗಿದೆ. ಆದನ್ನು ಮಾರ್ಪಾಟು ಮಾಡತಕ್ಕಂಥ ಹಲವಾರು ಕಾರಣಗಳಿಂದ ಬದಲಾಗುತ್ತದೆ ಆದುದರಿಂದ ತಮ್ಮ ಅಪ್ರಿಹೆನ್‌ಷನ್ ಏನಿದೆ ಕೆಲಸ ಆಗದೆ ದುಡ್ಡು ಹಾಳಾಗುತ್ತದೆ ಎಂದು ತಮಗೆ ಗೊತ್ತಾದರೆ ಆಂಪಲ್ ಆಪರ್ಚುನಿಟಿ ಇದೆ, ಆದರ ಮೇಲೆ ಯಾವುದೇ ರೀತಿಯ ತನಿಖೆ ನಡೆಸುವುದಕ್ಕೆ ಸಿದ್ಧ ನಿದ್ದೇನೆ. ಇವತ್ತು ಈ ಕೆಲಸಗಳು ಮುಗಿಯ ಬೇಕಾದರೆ ಇನ್ನು ೨೭೦೦ ಕೋಟಿ ರೂಪಾಯಿ ಬೇಕು ಎಂದು ಹೇಳಿದ್ದೇನೆ. ಇದು ಈಗ ಇರತಕ್ಕಂಥ ಆನ್ ಗೋಯಿಂಗ್ ವರ್ಕ್ಸ್‌ಗೆ ಮಾತ್ರ ಬಾಕಿಯದಕ್ಕೆ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು ಕೇಳುತ್ತೇನೆ. ಮೊದಲನೆಯ ಐಟಂ ಅಪ್ಪರ್ ಕೃಷ್ಣ ಪ್ರಾಜೆಕ್ಟ್-೧. ಅದಕ್ಕೂ ತೆಲುಗುಗಂಗಾಕ್ಕೂ ಲಿಂಕ್ ಇದೆ. ನಿನ್ನೆ ಪೇಪರಿನಲ್ಲಿ ಓದಿದ್ದೇನೆ. ಆದರಲ್ಲಿ ಕೆಲವು ಕಂಡೀಷನ್ಸ್ ಅನುಸರಿಸಿ ತೆಲುಗುಗಂಗಾಗೆ ಕ್ಲಿಯರೆನ್ಸ್ ಕೊಡುತ್ತೇವೆ ಎನ್ನುವುದು ಮೊನ್ನೆ ಪೇಪರಿನಲ್ಲಿ ಬಂದಿದೆ. ಅದು ಯಾವ ಕಂಡೀಷನ್, ಅದರಿಂದ ನಮಗೆ ತೊಂದರೆ ಏನು ಎನ್ನುವುದನ್ನು ಎಷ್ಟಾದ್ರ ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲುವಡ್ಡು ವಿನಲ್ಲಿ ನೀರಾವರಿ ಯೋಜನೆಯನ್ನು ಕಾರ್ಯಗತ ಗೊಳಿಸುವುದು.

೨೦೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ನೀರಾವರಿ ಯೋಜನೆಗೆ ಸರಕಾರದವರ ಮಂಜೂರಾತಿ ದೊರೆತಿದೆಯೇ ?

ಆ) ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಕಾಡಾ ಮಂತ್ರು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಅಂದಾಜಿಗೆ ಮಂಜೂರಾತಿಯಂ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಎಲ್ಲಾ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ಕೆಲಸ ಮಂಜೂರಾತಿಯಾಗಿಲ್ಲ. ಪರಿಶೀಲನಾ ಹಂತದಲ್ಲಿದೆ. ಇದಕ್ಕೆ ೮ ಕೋಟಿ ೮೫ ಲಕ್ಷ ೩೫ ಸಾವಿರ ಖರ್ಚು ಮಾಡ ಬೇಕು. ಅವರೂ ನಾನೂ ಇಬ್ಬರೂ ಸ್ಥಳ ಪರಿಶೀಲನೆ ಮಾಡಿದ್ದೇವೆ. ೧೩೧೦ ಹೆಕ್ಟೇರ್ ಮುಳುಗಡೆ ಯಲ್ಲಿ ೬೪ ಎಕರೆ ಅರಣ್ಯ ಭೂಮಿ ಇದೆ. ಅರಣ್ಯ ಭೂಮಿ ಮುಳುಗಡೆ ಮಾಡತಕ್ಕಂಥಾದ್ದರ ಬಗ್ಗೆ ಕೇಂದ್ರ ಸರ್ಕಾರದ ಪರವಾನಗಿ ಬೇಕಾಗಿದೆ, ಪ್ರಯತ್ನ ನಡೆಸುತ್ತಾ ಇದ್ದೇವೆ, ಸರ್ಕಾರಕ್ಕೂ ಅಷ್ಟೇ ಕುತೂಹಲ ಇದೆ, ಆಸಕ್ತಿ ಇದೆ. ಈ ಕೆಲಸಕ್ಕೆ ಮಂಜೂರಾತಿ ಕೊಡಬೇಕು ಎಂದು ಪ್ರಯತ್ನ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ವಿಶೇಷ ಪ್ರಯತ್ನ ದಿಂದಾಗಿ ಈ ಯೋಜನೆಗೆ ಮತ್ತೆ ಜೀವ ಬಂದಿದೆ. ನಾನು ತಮ್ಮಲ್ಲಿ ನೇರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಹುಶಃ ಶಿಕಾರಿಪುರ ತಾಲ್ಲೂಕಿನಲ್ಲಿ ರೈತಾಪಿ ಜನರಿಗೆ ಇನ್ನಾವುದೇ ಯೋಜನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ವರ್ಷವಾದರೂ ಅರಣ್ಯ ಇಲಾಖೆಯಿಂದ ಅನುಮತಿ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತೀರಾ, ಇದರ ಬಗ್ಗೆ ಸ್ಪಷ ವಾಗಿ ಉತ್ತರ ಕೊಡುತ್ತೀರಾ ?